ದಿನಾಂಕಃ **04.10.2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.

<u>ಪಾಟೀಸವಾಲುಃ 1, 3 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ ಎಸ್ ವಕೀಲರಿಂದಃ</u>

ನಾನು ಎಂ.ಕಾಂ. ಓದಿದ್ದೇನೆ. ನಾನು ನನ್ನ ಎಸ್ ಎಸ್ ಎಲ್ ಸಿ ಮತ್ತು ಪಿ ಯು ಸಿ ಯನ್ನು ಕರಿಮುದ್ದನಹಳ್ಳಿ, ಹುಣಸೂರು ತಾಲ್ಲೂಕಿನಲ್ಲಿ ಓದಿರುತ್ತೇನೆ. ದ್ವಿತೀಯ ಪಿ ಯು ಸಿ ಯನ್ನು ನಾನು 2002-2003 ರಲ್ಲಿ ಓದಿರುತ್ತೇನೆ. ಆ ಸಮಯದಲ್ಲಿ ನಾನು ಹುಣಸೂರು ತಾಲ್ಲೂಕಿನ ಎಲಚನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೆ. ನನ್ನ ತಾಯಿ ನಿಂಗಮ್ಮ ಸಿದ್ದಯ್ಯ ರವರಿಗೆ ಮದುವೆ ಮಾಡಿಕೊಂಡಿದ್ದರು ಎಂದು ತೋರಿಸಲು ನಾನು ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ಈ ಬಗ್ಗೆ ನಾನು ಆದಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಹಾಜರುಪಡಿಸಿದ್ದೇನೆ. ನನ್ನ ತಾಯಿ ನಿಂಗಮ್ಮ ರವರು ಸಿದ್ದಯ್ಯ ರವರನ್ನು ಮದುವೆ ಮಾಡಿಕೊಂಡಿದ್ದರು ಎಂದು ತೋರಿಸಲು ಅವರ ಮದುವೆಗೆ ಸಂಬಂಧಪಟ್ಟ ಯಾವುದೇ ದಾಖಲಾತಿಗಳನ್ನು ನಾನು ಹಾಜರುಪಡಿಸಿಲ್ಲ.

ಸಿದ್ದಯ್ಯ ರವರೇ ನನ್ನ ತಾಯಿ ನಿಂಗಮ್ಮ ರವರ ಗಂಡ ಎಂದು ತೋರಿಸಲು ನಾನು ಆದಾರ್ ಕಾರ್ಡ್ ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿದ ನಿಪಿ.12 ಆಧಾರ ಕಾರ್ಡ್ ನಲ್ಲಿ ಚಿಕ್ಕಭೈರಯ್ಯ ರವರ ಮಗ ಸಿದ್ದಯ್ಯ ಎಂದು ನಮೂದಾಗಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಚಿಕ್ಕಭೈರಯ್ಯ ನವರ ಮಗ ಸಿದ್ದಯ್ಯ ಪುಟ್ಟಗೌರಮ್ಮ ರವರನ್ನು ಮದುವೆ ಮಾಡಿಕೊಂಡಿದ್ದರು ಎಂದರೆ ಹೌದು. ಅವರ ಎರಡನೇ ಹೆಂಡತಿ ನಿಂಗಮ್ಮ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಸದರಿ ಪುಟ್ಟಗೌರಮ್ಮ ರವರಿಗೆ ಶಿವಮ್ಮ, ರತ್ನಯ್ಯ, ಶೀಲಮ್ಮ, ಭೈರಲಿಂಗಯ್ಯ (1 ರಿಂದ 4 ನೇ ಪ್ರತಿವಾದಿಗಳು) ಎಂಬ ನಾಲ್ಕು ಜನ ಮಕ್ಕಳು ಇದ್ದಾರೆ ಎಂದರೆ ಸರಿ. 1 ಮತ್ತು 3 ನೇ ಪ್ರತಿವಾದಿ ಮದುವೆಯಾದ ನಂತರ ತಮ್ಮ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಪ್ರತಿವಾದಿಯರು ಎಲಚನಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನಾವು ಕೂಡಾ ಅದೇ ಗ್ರಾಮದಲ್ಲಿ ವಾಸವಾಗಿದ್ದೆವು ಎಂದು ಸಾಕ್ಷಿ ಹೇಳುತ್ತಾರೆ. ಪುಟ್ಟಗೌರಮ್ಮ ಹಾಗೂ 2 ಮತ್ತು 4 ನೇ ಪ್ರತಿವಾದಿ ಹಾಗೂ ಅವರ ತಂದೆ ಸಿದ್ದಯ್ಯ ಒಂದೇ ಮನೆಯಲ್ಲಿ ಒಟ್ಟಿಗೆ ವಾಸವಾಗಿದ್ದರು ಎಂದರೆ ಸರಿ. ನಾವು ಕೂಡಾ ಅದೇ ಮನೆಯಲ್ಲಿ ಅವರೊಟ್ಟಿಗೆ ವಾಸವಾಗಿದ್ದವು ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ನಾವು ಮತ್ತು ಪ್ರತಿವಾದಿಯರು ಒಟ್ಟಿಗೆ ಒಂದೇ ಮನೆಯಲ್ಲಿ ವಾಸವಾಗಿದ್ದವು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಪೋಟೋಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಮನೆ ಮತ್ತು ಒಟ್ಟಿಗೆ ಇರುವ ಪೋಟೋವನ್ನು ಹಾಜರುಪಡಿಸಿದ್ದೇನೆ.

ನನ್ನ ತಾಯಿ ನಿಂಗಮ್ಮ ಮೈಸೂರು ತಾಲ್ಲೂಕು ಮೈಸೂರು ಜಿಲ್ಲೆಯ ಮುಗತಹಳ್ಳಿ ಗ್ರಾಮದವರು ಎಂದರೆ ಸರಿ.

ಚಿಕ್ಕಭೈರಯ್ಯನವರ ಕುಟುಂಬಕ್ಕೆ ಒಟ್ಟು 9 ಎಕರೆ ಜಮೀನು ಇತ್ತು. ಸರ್ವೆ ನಂಃ14/2 ರಲ್ಲಿ 2 ಎಕರೆ 30 ಗುಂಟೆ ಜಮೀನು, ಸರ್ವೆ ನಂಃ 14/3 ರಲ್ಲಿ 3 ಎಕರೆ 36 ಗುಂಟೆ ಜಮೀನು, ಸರ್ವೆ ನಂಃ 14/1 ರಲ್ಲಿ 1 ಎಕರೆ 30 ಗುಂಟೆ ಜಮೀನು ಎಂದು ಇಷ್ಟು ಹೇಳಿ ಸಾಕ್ಷಿ ಸುಮ್ಮನೇ ನಿಂತುಕೊಂಡಿರುತ್ತಾರೆ. ಈ ಎಲ್ಲಾ ಜಮೀನುಗಳು ಚಿಕ್ಕಭೈರಯ್ಯನವರ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಸದರಿ ಜಮೀನುಗಳಲ್ಲಿ ಪ್ರತಿವಾದಿಗಳಿಗೆ ಎಷ್ಟು ಭಾಗ ಜಮೀನು ಬಂದಿತ್ತು ಎಂದರೆ ವಿಭಾಗ ಆಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಚಿಕ್ಕಭೈರಯ್ಯನವರಿಗೆ ಒಟ್ಟು ಐದು ಜನ ಮಕ್ಕಳು. ಚಿಕ್ಕಭೈರಯ್ಯನವರ ಅಣ್ಣತಮ್ಮಂದಿರು ಎಲ್ಲಾ ವಿಭಾಗ ಮಾಡಿಕೊಂಡಿರುತ್ತಾರೆ.

ಚಿಕ್ಕಭೈರಯ್ಯನವರಿಂದ ಪ್ರತಿವಾದಿಯರಿಗೆ ವಿಭಾಗದಲ್ಲಿ 7 ಎಕರೆ 07 ಗುಂಟೆ ಜಮೀನು ಬಂದಿರುತ್ತದೆ. ಸದರಿ ಜಮೀನು ಚಿಕ್ಕಭೈರಯ್ಯನವರಿಗೆ ಸಾಗುವಳಿ ಮೂಲಕ ಬಂದಿರುತ್ತದೆ. 1968 ರಲ್ಲಿ ಚಿಕ್ಕಭೈರಯ್ಯನವರಿಗೆ 9 ಎಕರೆ ಜಮೀನು ಸಾಗುವಳಿ ಮುಖಾಂತರ ಬಂದಿರುತ್ತದೆ. ಈ ಬಗ್ಗೆ ನಾನು ದಾಖಲಾತಿಯನ್ನು ಹಾಜರುಪಡಿಸಿದ್ದೇನೆ.

ನನ್ನ ತಾಯಿಯ ಮದುವೆ ದಿಃ 21.06.1976 ರಲ್ಲಿ ಆಗಿರುತ್ತದೆ.

ದಾವಾ ಐಟಂ ನಂಃ 3 ಸ್ವತ್ತು ಸಿದ್ದಯ್ಯನವರು ತಮ್ಮ ಜೀವಿತ ಕಾಲದಲ್ಲಿ ಗಳಿಸಿದ ಆಸ್ತಿ ಅದು ಅವರ ಸ್ವಯಾರ್ಜಿತ ಆಸ್ತಿ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಸದರಿ ಜಮೀನು ಸಿದ್ದಯ್ಯನವರಿಗೆ ತಹಸೀಲ್ದಾರ್ ಕಛೇರಿಯಿಂದ ಕಾಡು ಕಡಿದು ಸಾಗುವಳಿ ಮಾಡಿದ್ದಕ್ಕೆ ಬಂದಿರುತ್ತದೆ ಎಂದರೆ ಸರಿ.

ಐಟಂ ನಂಃ 5 ನೇ ಸ್ವತ್ತು ಸಿದ್ದಯ್ಯ ರವರ ಹೆಂಡತಿ ಪುಟ್ಟಗೌರಮ್ಮ ರವರ ಹೆಸರಿಗೆ ಸಾಗುವಳಿ ಮುಖಾಂತರ ಬಂದಿರುತ್ತದೆ ಎಂದರೆ ಸರಿ. ಅದು ನಮ್ಮ ಒಟ್ಟು ಕುಟುಂಬದ ಹೆಸರಿನಲ್ಲಿ ಸಾಗುವಳಿ ಮುಖಾಂತರ ಬಂದಿರುತ್ತದೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಸದರಿ ಜಮೀನು ಪುಟ್ಟಗೌರಮ್ಮ ರವರ ಹೆಸರಿನಲ್ಲಿ ಸಾಗುವಳಿ ಚೀಟಿ ಆಗಿರುತ್ತದೆ. ಸದರಿ ಜಮೀನನ್ನು 1999 ರಲ್ಲಿ ಸಾಗುವಳಿ ಮುಖಾಂತರ ಬಂದಿರುತ್ತದೆ ಎಂದರೆ ಸರಿ. ಸದರಿ ಸ್ವತ್ತು ಪುಟ್ಟಗೌರಮ್ಮ ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ, ಅದು ಒಟ್ಟು ಕುಟುಂಬದ ಆಸ್ತಿ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ.

ಐಟಂ ನಂಃ 1 ಮತ್ತು 2 ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿ ಎಂದರೆ ಸಾಕ್ಷಿ ಅದು ವಾದಿಯರ ಒಟ್ಟು ಕುಟುಂಬದ ಆಸ್ತಿಯೂ ಕೂಡಾ ಎಂದು ಹೇಳುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ಜಂಪನಹಳ್ಳಿಯಲ್ಲಿಯೂ ಕೂಡಾ ಹಾಗೂ ಎಲಚನಹಳ್ಳಿಯಲ್ಲಿಯೂ ಕೂಡಾ ವಾಸವಾಗಿದ್ದವು. ನಾವು ಎರಡು ಹಳ್ಳಿಯಲ್ಲಿ ವಾಸವಾಗಿದ್ದವು ಎಂದು ನಾನು ನನ್ನ ವಾದಪತ್ರದಲ್ಲಿ ಹೇಳಿ ಬರೆಸಿದ್ದೇನೆ . ಈ ಬಗ್ಗೆ ನಾನು ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಜಂಪನಹಳ್ಳಿಂದು ವಿಳಾಸವನ್ನು ನೀಡಿರುತ್ತೇನೆಯಾ ಎಂಬ ಪ್ರಶ್ನೆಗೆ ನಾವು ಅಲ್ಲಿ ವಾಸಇದ್ದೆವು ಎಂಬುದನ್ನು ಮಾತ್ರ ಹೇಳಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ.

ಪ್ರತಿವಾದಿಯ ತಂದೆ 1999 ರಲ್ಲಿ ತೀರಿಹೋಗಿರುತ್ತಾರೆ ಎಂದರೆ ಅವರು ವಾದಿಯರಿಗೂ ಕೂಡಾ ತಂದೆ ಎಂದು ಸಾಕ್ಷಿ ಹೇಳುತ್ತಾರೆ. ನನ್ನ ತಂದೆ ಸಿದ್ದಯ್ಯ ಬೇರೆ

ಯಾಗಿದ್ದು ಅವರು ಚಿಕ್ಕಬೈರಯ್ಯನವರ ಮಗ ಸಿದ್ದಯ್ಯ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿಗೆ ಮದುವೆಯಾದಾಗಿನಿಂದ ನಾವು ಮತ್ತು ಪ್ರತಿವಾದಿಯರು ಮೊದಲಿನಿಂದಲೂ ಜಂಪನಹಳ್ಳಿಯಲ್ಲಿ ವಾಸವಾಗಿದ್ದೆವು. ನಾನು ಮತ್ತು ಪ್ರತಿವಾದಿಯರು ಒಟ್ಟಿಗೇ ವಾಸವಿದ್ದಾಗ ಸದರಿ ಮನೆಯಲ್ಲಿ ನಡೆದಂತಹ ವ್ಯವಹಾರ ಮತ್ತು ಕೋರ್ಟ್ ವ್ಯವಹಾರವನ್ನು ತಿಳಿದುಕೊಂಡಿದ್ದೇನೆ.

ಪ್ರಸ್ತುತ ದಾವೆ ಬಿಟ್ಟರೆ 2 ನೇ ಪ್ರತಿವಾದಿ ರತ್ನಯ್ಯ ರವರು ದೊಡ್ಡಸಿದ್ದಯ್ಯ ರವರ ವಿರುದ್ಧ ದಾವೆ ಹೂಡಿದ್ದರು ಎಂಬುದರ ಬಗ್ಗೆ ನಾನು ತಕರಾರು ಹಾಕುವ ಸಮಯದಲ್ಲಿ ತಿಳಿದು ಬಂದಿರುತ್ತದೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ನಾವು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದಾಗ ನಾವು ಜಮೀನು ಮತ್ತು ದಾವೆಗಳ ಬಗ್ಗೆ ಚರ್ಚೆ ಮಾಡುತ್ತಿದ್ದೆವು ಆಗ 1 ನೇ ಪ್ರತಿವಾದಿ ನಮ್ಮ ಅಣ್ಣ ಎಲ್ಲಾ ಸರಿ ಮಾಡುತ್ತೇನೆ ಎಂದು ನಮಗೆ ಭರವಸೆ ನೀಡುತ್ತಿದ್ದರು ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. 2 ನೇ ಪ್ರತಿವಾದಿ ರತ್ನಯ್ಯ ಸಿದ್ದಯ್ಯ ರವರು ಜೀವಂತವಿದ್ದಾಗಲೇ ಸದರಿ ದಾವೆಗಳನ್ನು ಹೂಡಿದ್ದರು. ಆ ಸಮಯದಲ್ಲಿ ಜಮೀನಿನ ಖಾತೆಗಳು ಸಿದ್ದಯ್ಯ ರವರ ಹೆಸರಿನಲ್ಲಿಯೇ ಇದ್ದೆವು ಎಂದರೆ ಸರಿ. ಸಾಮಾನ್ಯವಾಗಿ ಯಾರ ಹೆಸರಿನಲ್ಲಿ ಖಾತೆ ಇರುತ್ತದೆಯೋ ಅವರ ವಿರುದ್ಧ ದಾವೆ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ. 3 ನೇ ಪ್ರತಿವಾದಿ ರತ್ನಯ್ಯ ರವರಿಗೆ ಅವರ ತಂದೆ ಸಿದ್ದಯ್ಯ ರವರ ದಾವೆ ನಡೆಸಲು ಪವರ್ ಆಫ್ ಅಟಾರ್ನಿಯನ್ನು ನೀಡಿದ್ದರಾ ಎಂಬ ಪ್ರಶ್ನೆಗೆ ನನಗೆ ಗೊತ್ತಿಲ್ಲ, ಆದರೆ ಅವರು ನಮ್ಮ ತಂದೆಯ ಮೊದಲನೇ ಮಗನಾಗಿದ್ದರಿಂದ

ನಾನೇ ನೋಡಿಕೊಳ್ಳುತ್ತೇನೆ ಎಂದು ಓಡಾಡುತ್ತಿದ್ದರು. ಸಿದ್ದಯ್ಯ ರವರು ತೀರಿಹೋದ ನಂತರ ಅವರ ಹೆಂಡತಿ ಪುಟ್ಟಗೌರಮ್ಮ ರವರು ಹಾಗೂ ಪುಟ್ಟಗೌರಮ್ಮ ತೀರಿಹೋದರ ನಂತರ ಅವರ ಮಗ ರತ್ನಯ್ಯ ಮನೆಯಜಮಾನಿಕೆ ಮಾಡುತ್ತಿದ್ದರು ಎಂದರೆ ಸರಿ. ಸಿದ್ದಯ್ಯನವರು ತೀರಿಹೋದ ನಂತರ ಅವರ ಮಕ್ಕಳಾದ ಪ್ರತಿವಾದಿಗಳು ತಮ್ಮ ಹೆಸರಿಗೆ ದಾವಾ ಆಸ್ತಿಗಳನ್ನು ಪೌತಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರು ದಾವಾ ಆಸ್ತಿಯ ಸ್ವಾಧೀನ ಹೊಂದಿರುತ್ತಾರೆ ಎಂದರೆ ನಾವು ಸಹ ಸ್ವಾಧೀನದಲ್ಲಿ ಇದ್ದೇವೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಒಂದು ವೇಳೆ ನಾವು ಸಿದ್ದಯ್ಯನ ಮಕ್ಕಳೇ ಆಗಿದ್ದರೆ ಸದರಿ ಪೌತಿ ಖಾತೆಗೆ ನಾವು ತಕರಾರು ಸಲ್ಲಿಸುತ್ತಿದ್ದೆವು ಎಂದರೆ 3 ನೇ ಪ್ರತಿವಾದಿ ರತ್ನಯ್ಯ ನಾನು ಎಲ್ಲಾ ನೋಡಿಕೊಳ್ಳುತ್ತೇನೆ ಎಂದು ಹೇಳಿ ಖಾತೆ ಮಾಡಿಸಿರುತ್ತಾರೆ ಎಂದು ಹೇಳುತ್ತಾರೆ. ಪ್ರಸ್ತುತ ದಾವೆ ಸಲ್ಲಿಸುವ ನಾಲ್ಕು ತಿಂಗಳು ಮೊದಲು ಸದರಿ ಪೌತಿ ಖಾತೆ ಬಗ್ಗೆ ತಿಳಿದಿರುತ್ತದೆ. ಈ ಬಗ್ಗೆ ನಾವು ಎ ಸಿ ನ್ಯಾಯಾಲಯದಲ್ಲಿ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ, ಆದರೆ ಪ್ರಸ್ತುತ ದಾವೆ ಸಲ್ಲಿಸಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ.

ಪ್ರತಿವಾದಿಗಳ ತಂದೆ ಚಿಕ್ಕಭೈರಯ್ಯನವರ ಮಗ ಸಿದ್ದಯ್ಯ ಬೇರೆ ವ್ಯಕ್ತಿಯಾಗಿದ್ದು ನಮ್ಮ ತಂದೆ ಸಿದ್ದಯ್ಯ ಬೇರೆಯಾಗಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರ ತಂದೆ ಸಿದ್ದಯ್ಯ ಹಾಗೂ ನಮ್ಮ ತಂದೆ ಕೂಡಾ ಸಿದ್ದಯ್ಯ ಎಂದು ಸಾಕ್ಷಿ ಹೇಳುತ್ತಾರೆ. ನನ್ನ ತಾಯಿ ನಿಂಗಮ್ಮ ಪ್ರತಿವಾದಿಯರ ತಂದೆ ಸಿದ್ದಯ್ಯನವರ ಹೆಂಡತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ, ಅವರು ಎರಡನೇ ಹೆಂಡತಿ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ.

ನಾನು ಹಾಜರುಪಡಿಸಿರುವಂತಹ ದಾಖಲಾತಿಗಳಲ್ಲಿ ಇರುವ ಸಿದ್ದಯ್ಯನವರೇ ಬೇರೆ, ಪ್ರತಿವಾದಿಯರ ತಂದೆ ಸಿದ್ದಯ್ಯನೇ ಬೇರೆ ಎಂದರೆ ಸರಿಯಲ್ಲ.

ನನ್ನ ತಾಯಿ ಮದುವೆಯಾದ ಸಮಯದಲ್ಲಿ ಸಿದ್ದಯ್ಯನವರ ಹೆಂಡತಿ ಪುಟ್ಟಗೌರಮ್ಮ ಇದ್ದರು ಎಂದರೆ ಸರಿ. ಪುಟ್ಟಗೌರಮ್ಮರವರಿಗೆ ಹುಷಾರು ಇಲ್ಲದ ಕಾರಣ ಅವರ ಒಪ್ಪಿಗೆ ಮೇರೆಗೆ ಸದರಿ ಮದುವೆಗೆ ಪುಟ್ಟಗೌರಮ್ಮರವರೇ ಅನುಮತಿ ನೀಡಿರುತ್ತಾರೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಈ ಬಗ್ಗೆ ನನ್ನ ವಾದಪತ್ರದಲ್ಲಿ ಹಾಗೂ ಸಾಕ್ಷಿ ಪ್ರಮಾಣಪತ್ರದಲ್ಲಿ ಹೇಳಿದ್ದೇನೆ. ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ಬರೆದಿರುವ ಅಂಶಗಳನ್ನು ತಿಳಿದುಕೊಂಡಿದ್ದೇನೆ. ಪ್ರತಿವಾದಿಯರು ನಮಗೆ ಹಾಗೂ ಅವರಿಗೆ ಯಾವುದೇ ಸಂಬಂಧ ಇಲ್ಲ ಅವರು ಅಪರಿಚಿತರು ಎಂದು ತಮ್ಮ ತಕರಾರಿನಲ್ಲಿ ಸಲ್ಲಿಸಿರುತ್ತಾರೆ. ಚಿಕ್ಕಬೈರಯ್ಯನವರ ಮಗ ಸಿದ್ದಯ್ಯನವರಿಗೆ ಪ್ರತಿವಾದಿಗಳು ಮಾತ್ರ ವಾರಸುದಾರರಾಗಿದ್ದು ವಾದಿಗಳು ವಾರಸುದಾರರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಹಾಗೂ ಪ್ರತಿವಾದಿಗಳಿಗೆ ಮತ್ತು ನಮಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ನಾನು ಸುಳ್ಳು ದಾವೆಯಲ್ಲಿ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಶ್ರೀ ಎಂ ಬಿ ವಕೀಲರಿಂದಃ</u>

ನಾನು ವ್ಯವಸಾಯ ಮಾಡುತ್ತಿದ್ದೇನೆ. ನಾನು ಬಿಳಿಕೆರೆ ಹೋಬಳಿ ಎಲಚನಹಳ್ಳಿ ಗ್ರಾಮದ ಸರ್ವೆ ನಂಃ 14/2, 14/3, 14/4 ಹಾಗೂ ಸರ್ವೆ ನಂಃ 18 ರಲ್ಲಿ ನಾನು ವ್ಯವಸಾಯ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ.

ವಾದಿ ನಿಂಗಮ್ಮ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಲು ತೊಂದರೆ ಇಲ್ಲ ಎಂದದಿರೆ ಅವರಿಗೆ ಪಾರ್ಶ್ವವಾಯು ಆಗಿದ್ದು ಅವರಿಗೆ ನ್ಯಾಯಾಲಯಕ್ಕೆ ಬರಲು ಸಾಧ್ಯವಿಲ್ಲ. ಸದರಿಯವರಿಗೆ 2015 ರಲ್ಲಿ ಪಾರ್ಶ್ವವಾಯು ಆಗಿರುತ್ತದೆ. ದಾವಾ ಸ್ವತ್ತುಗಳನ್ನು ಮಾರಾಟ ಮಾಡಬಾರದೆಂಬ ಪ್ರಮಾಣಪತ್ರವನ್ನು ದಿಃ 10.10.2019 ರಂದು ನನ್ನ ತಾಯಿ ನಿಂಗಮ್ಮ ಹಾಕಿದ್ದಾರೆ ಎಂದರೆ ನಾವು ದಾವಾ ಆಸ್ತಿಗಳನ್ನು ಮಾರಾಟ ಮಾಡಬಾರದೆಂದು ಪ್ರಮಾಣಪತ್ರ ಸಲ್ಲಿಸಿಲ್ಲ ಭಾಗಾಂಶ ಕೇಳಿ ಮಾತ್ರ ಪ್ರಮಾಣಪತ್ರ ಸಲ್ಲಿಸಿದ್ದೇವೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ.

ದಾವಾ ಸಲ್ಲಿಸಬೇಕಾದರೆ ನನ್ನ ತಾಯಿ ನಿಂಗಮ್ಮ ದಾವಾ ಐಟಂ ನಂಃ 3 ರಿಂದ 5 ಜಮೀನುಗಳನ್ನು ಬೇರೆ ಯಾರಿಗೂ ಮಾರಾಟ ಮಾಡಬಾರದೆಂದು ನ್ಯಾಯಾಲಯದಲ್ಲಿ ದಿಃ 10.10.2019 ರಂದು ಪ್ರಮಾಣಪತ್ರ ಸಲ್ಲಿಸಿದ್ದಾರೆ ಎಂದರೆ ಸರಿ. ದಿಃ 04.02.2021 ರಂದು ನನ್ನ ತಾಯಿ ನ್ಯಾಯಾಲಯದಲ್ಲಿ ತಿದ್ದುಪಡಿ ವಾದಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ . ಉಳಿದ ವಾದಿಯರು ಕೂಡಾ ಸಾಕ್ಷ್ಯ

ನುಡಿಯಲು ನನಗೆ ಮುಕ್ತೀಯರ್ ಪತ್ರವನ್ನು ಬರೆದುಕೊಟ್ಟಿದ್ದಾರೆ . ನನ್ನ ತಾಯಿ ಚೆನ್ನಾಗಿದ್ದು ಆರೋಗ್ಯವಂತರಾಗಿದ್ದು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯಾಂಶ ಹೊರಬರುತ್ತದೆ ಎಂಬ ಉದ್ದೇಶದಿಂದ ಅವರಿಗೆ ಪಾರ್ಶ್ವವಾಯು ಆಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನಿಪಿ.10 ವ್ಯಾಸಂಗ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿಪಿ.10 ರಲ್ಲಿ 2 ನೇ ಪ್ರತಿವಾದಿಯ ಹೆಸರು ಎಸ್. ರೇವಣ್ಣ ಸಿದ್ದಯ್ಯ ಎಂದು ನಮೂದಾಗಿದ್ದು ವಾದ ಪತ್ರದಲ್ಲಿ ಅವರ ಹೆಸರು ಬರೀ ರೇವಣ್ಣ ಎಂದು ನಮೂದಾಗಿದೆ ಎಂದರೆ ಅವರೆಡು ಒಂದೇ ಎಂದು ಸಾಕ್ಷಿ ನುಡಿಯುತ್ತಾರೆ. ಸಿದ್ದಯ್ಯ ರವರ ತಾತನ ಹೆಸರು ದೊಡ್ಡಮಾರಯ್ಯ. ದೊಡ್ಡಮಾರಯ್ಯನ ಹೆಂಡತಿಯ ಹೆಸರು ನಿಂಗಮ್ಮ. ದೊಡ್ಡಮಾರಯ್ಯನವರು ಯಾವಾಗ ಪೌತಿಯಾಗಿರುತ್ತಾರೆ ನನಗೆ ಗೊತ್ತಿಲ್ಲ. ನಿಂಗಮ್ಮನವರು ಪೌತಿಯಾಗಿಲ್ಲ ಇನ್ನು ಜೀವಂತವಾಗಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿ ಪುನಃ ದೊಡ್ಡಮಾರಯ್ಯನವರ ಹೆಂಡತಿ ನಿಂಗಮ್ಮ ಈಗ ಪೌತಿಯಾಗಿರುತ್ತಾರೆ ಎಂದು ಹೇಳುತ್ತಾರೆ.

ಪ್ರತಿವಾದಿಯರ ತಾತನ ಹೆಸರು ಚಿಕ್ಕಬೈರಯ್ಯ ಎಂದರೆ ಅವರಿಗಷ್ಟೇ ಅಲ್ಲ ನಮಗೂ ತಾತ ಚಿಕ್ಕಬೈರಯ್ಯ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಸದರಿ ಚಿಕ್ಕಬೈರಯ್ಯನವರು ದಿಃ 19.11.1983 ರಲ್ಲಿ ಮರಣಹೊಂದಿರುತ್ತಾರೆ. ನಾನು

ಸದರಿಯವರ ಮರಣ ಪ್ರಮಾಣಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ.

ಚಿಕ್ಕಭೈರಯ್ಯನವರ ಹೆಂಡತಿಯ ಹೆಸರು ದೇವಮ್ಮ. ಅವರು ಯಾವಾಗ ಮೌತಿಯಾಗಿರುತ್ತಾರೆ ದಿನಾಂಕ ನೆನಪಿಲ್ಲ. ಚಿಕ್ಕಭೈರಯ್ಯನವರಿಗೆ ಮೂರು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣುಮಕ್ಕಳು. 1. ಸಿದ್ದಯ್ಯ ನನ್ನ ತಂದೆ, 2. ದೊಡ್ಡಸಿದ್ದಯ್ಯ, 3. ಕುಳ್ಳಬೋರಯ್ಯ, 4. ಸಿದ್ದಮ್ಮ, 5. ಪುಟ್ಟಮ್ಮ (ಮೌತಿ).

ಸಿದ್ದಯ್ಯ ರವರು ದಿಃ 12.12.1999 ರಲ್ಲಿ ಮೌತಿಯಾಗಿರುತ್ತಾರೆ. ದೊಡ್ಡಸಿದ್ದಯ್ಯನವರು ದಿಃ 27.09.2020 ರಲ್ಲಿ ಮೌತಿಯಾಗಿರುತ್ತಾರೆ. ಕುಳ್ಳಬೋರಯ್ಯ ಮತ್ತು ಸಿದ್ದಮ್ಮ ಈಗಲೂ ಜೀವಂತವಾಗಿದ್ದಾರೆ. ಪುಟ್ಟಮ್ಮ ಮೌತಿಯಾಗಿರುತ್ತಾರೆ.

ಸಿದ್ದಯ್ಯನವರು ದಿಃ 06.03.1961 ರಂದು ಮೈಸೂರು ಜಿಲ್ಲೆ ಹೆಚ್ ಡಿ ಕೋಟೆ ತಾಲ್ಲೂಕು ಸರಗೂರು ಹೋಬಳಿ ಚಕ್ಕೂರು ಗ್ರಾಮದ ಚಿಕ್ಕಗೋಪಾಲಯ್ಯ ರವರ 3 ನೇ ಮಗಳಾದ ಪುಟ್ಟಗೌರಮ್ಮ ಉರುಫ್ ಗೋಪಮ್ಮ ಇವರನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. ಪುಟ್ಟಗೌರಮ್ಮ ರವರ ತಂದೆ ಹಾಗೂ ಅವರ ಅಣ್ಣತಮ್ಮಂದಿರು ಸದರಿ ಮದುವೆಯ ನಂತರ ಮೈಸೂರು ಜಿಲ್ಲೆ ಹೆಚ್ ಡಿ ಕೋಟೆ ತಾಲ್ಲೂಕು ಹಂಪಾಪುರ ಹೋಬಳಿ ಜಂಪನಹಳ್ಳಿಗೆ ಬಂದು ಸೇರಿಕೊಂಡರು ಎಂದರು ಸರಿಯಲ್ಲ, ಅವರು ತಮ್ಮ ಊರಿನಲ್ಲಿಯೇ ವಾಸ ಇದ್ದರು ಎಂದು ಹೇಳುತ್ತಾರೆ.

ಸಿದ್ದಯ್ಯ ಮತ್ತು ಅವರ ಹೆಂಡತಿ ಪುಟ್ಟಗೌರಮ್ಮ ರವರಿಗೆ 1 ನೇ ಪ್ರತಿವಾದಿ ಎಸ್ ಸಿದ್ದಮ್ಮ ದಿಃ 04.02.1966 ರಲ್ಲಿ ಜನಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ರತ್ನಯ್ಯ 2 ನೇ ಪ್ರತಿವಾದಿ ದಿಃ 05.06.1968 ರಲ್ಲಿ ಜನಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ಶೀಲಮ್ಮ 3 ನೇ ಪ್ರತಿವಾದಿ ದಿಃ 01.06.1972 ರಲ್ಲಿ ಜನಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ಜೆ ಎಸ್ ಭೈರಲಿಂಗಯ್ಯ 4 ನೇ ಪ್ರತಿವಾದಿ ದಿಃ 01.06.1975 ರಲ್ಲಿ ಜನಿಸಿರುತ್ತಾರೆ ಎಂದರೆ ಸರಿ.

ಸಿದ್ದಯ್ಯ ಮತ್ತು ನನ್ನ ತಾಯಿ ಮದುವೆ ದಿಃ 21.06.1976 ರಲ್ಲಿ ಆಗಿರುತ್ತದೆ. ಆ ಸಂದರ್ಭದಲ್ಲಿ ಸಿದ್ದಯ್ಯ ರವರಿಗೆ ಇಬ್ಬರು ಗಂಡು ಮಕ್ಕಳು ಇದ್ದು ಅವರ ಹೆಂಡತಿ ಕೂಡಾ ಆರೋಗ್ಯವಂತರಾಗಿದ್ದರಿಂದ ಆ ಸಮಯದಲ್ಲಿ ಸಿದ್ದಯ್ಯ ನನ್ನ ತಾಯಿಗೆ ಮದುವೆ ಮಾಡಿಕೊಂಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಸಿದ್ದಯ್ಯ ಮತ್ತು ಪುಟ್ಟಗೌರಮ್ಮನವರಿಗೆ 1 ರಿಂದ 4 ನೇ ಪ್ರತಿವಾದಿ ಬಿಟ್ಟರೇ ಬೇರೆ ಯಾರು ವಾರಸುದಾರರು ಇಲ್ಲ ಎಂದರೆ ಸರಿಯಲ್ಲ, ವಾದಿಯರು ಕೂಡಾ ವಾರಸುದಾರರು ಇದ್ದೇವೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ನನಗಾಗಲೀ ಅಥವಾ ಪ್ರತಿವಾದಿಯರಿಗಾಗಲೀ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ನಾನು ನಮೂದು ಮಾಡಿರುವ ವಂಶವೃಕ್ಷ ಕೇವಲ ದಾವೆಗೋಸ್ಕರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ ಅದೇ ಸರಿಯಾದ ವಂಶವೃಕ್ಷ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಅದೇ ನಿಜವಾದ ವಂಶವೃಕ್ಷ ಎಂದು ತೋರಿಸಲು ತಹಸೀಲ್ದಾರ್ ರವರ

ಮುಂದೆ ಅರ್ಜಿ ಸಲ್ಲಿಸಿ ವಂಶವೃಕ್ಷವನ್ನು ಪಡೆದು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ.

ಸಿದ್ದಯ್ಯನವರಿಗೆ ಪುಟ್ಟಗೌರಮ್ಮ ಮೊದಲನೇ ಹೆಂಡತಿ ಹಾಗೂ ನನ್ನ ತಾಯಿ ಎರಡನೇ ಹೆಂಡತಿ, ನಾವು ಮತ್ತು ಪ್ರತಿವಾದಿಯರು ಒಂದೇ ಕುಟುಂಬದಲ್ಲಿ ವಾಸವಾಗಿದ್ದವು ಎಂದು ತೋರಿಸಲು ಪಡಿತರ ಚೀಟಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಅದು ಮೊದಲು ಇತ್ತು ಈಗ ಅದನ್ನು ಡಿವೈಡ್ ಮಾಡಿದ್ದೇವೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಯಾವ ವರ್ಷ ಅದು ಡಿವೈಡ್ ಆಗಿರುತ್ತದೆ ಎಂದು ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾವು ಸಿದ್ದಯ್ಯನವರ ಕುಟುಂಬಕ್ಕೆ ಅಪರಿಚಿತರು ಎಂದರೆ ಸರಿಯಲ್ಲ.

ದಿಃ 30.11.1959 ರಂದು ವಿಶೇಷ ಭೂ ಉಪವಿಭಾಗಾಧಿಕಾರಿಗಳು ಚಿಕ್ಕಭೈರಯ್ಯನವರಿಗೆ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಎಲಚನಹಳ್ಳಿ ಗ್ರಾಮದ ಸರ್ವೆ ನಂಃ 14/1 ರಲ್ಲಿ 1 ಎಕರೆ 30 ಗುಂಟೆ, ಸರ್ವೆ ನಂಃ 14/2 ರಲ್ಲಿ 3 ಎಕರೆ 35 ಗುಂಟೆ, ಸರ್ವೆ ನಂಃ 14/3 ರಲ್ಲಿ 3 ಎಕರೆ 16 ಗುಂಟೆ ಜಮೀನನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ನಮಗೆ ಗೊತ್ತು ಎಂದು ನುಡಿಯುತ್ತಾರೆ. ದಿಃ 12.09.1968 ರಲ್ಲಿ ಅವರಿಗೆ ಸಾಗುವಳಿ ಚೀಟಿಯನ್ನು ಕೂಡಾ ನೀಡಿರುತ್ತಾರೆ ಎಂದರೆ ಸರಿ. ಅದೇ ಪ್ರಕಾರ ಎಂ ಆರ್ ನಂಃ 6/1968-69 ರಂತೆ ಸದರಿ ಜಮೀನುಗಳು ಅವರ ಹೆಸರಿಗೆ ಖಾತೆ ಕೂಡಾ ಆಗಿರುತ್ತವೆ ಎಂದರೆ ಸರಿ.

ಸದರಿ ಜಮೀನುಗಳ ಪೈಕಿ ಸರ್ವೆ ನಂಃ 14/1 ರಲ್ಲಿ 1 ಎಕರೆ 30 ಗುಂಟೆ ಜಮೀನು ನನ್ನ ಅತ್ತೆಯಾದ ಸಿದ್ದಮ್ಮ ರವರ ಹೆಸರಿಗೆ ಖಾತೆಯಾಗಿರುತ್ತದೆ. ಸಿದ್ದಯ್ಯ, ಕುಳ್ಳಬೋರಯ್ಯ, ದೊಡ್ಡಸಿದ್ದಯ್ಯ ಇವರ ಮಧ್ಯೆ ಸದರಿ ಸರ್ವೆ ನಂಬರುಗಳಿಗೆ ಸಂಬಂಧಪಟ್ಟಂತೆ ವಿಭಾಗ ಪತ್ರ ಆಗಿರುತ್ತದೆ. ಆ ರೀತಿ ವಿಭಾಗ ಪತ್ರ ಆಗಿರುತ್ತದೆ ಎಂದು ತೋರಿಸಲು ನಾನು ಸದರಿ ವಿಭಾಗಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಜಮೀನುಗಳಲ್ಲದೇ ಚಿಕ್ಕಭೈರಯ್ಯನವರಿಗೆ ಒಂದು ಮನೆ ಕೂಡಾ ಇತ್ತು. ಅದು ಕೂಡಾ ಅವಾಗಲೇ ವಿಭಾಗ ಕೂಡಾ ಆಗಿರುತ್ತದೆ. ಆ ರೀತಿ ಮನೆ ಇತ್ತು ಅದು ಕೂಡಾ ವಿಭಾಗ ಆಗಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯದ ಮುಂದೆ ದಾಖಲಾತಿ ಹಾಜರುಪಡಿಸಿಲ್ಲ.

ಐಟಂ ನಂಃ 3 ಸ್ವತ್ತು ಪ್ರತಿವಾದಿಯರ ತಂದೆ ಸಿದ್ದಯ್ಯನವರಿಗೆ ದಿಃ 30.11.1959 ರಲ್ಲಿ ಮಂಜೂರಾಗಿರುತ್ತದೆ ಎಂದರೆ ಅದು ವಾದಿ ಮತ್ತು ಪ್ರತಿವಾದಿಯರ ತಂದೆ ಸಿದ್ದಯ್ಯನವರಿಗೆ ಮಂಜೂರಾಗಿರುತ್ತದೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ದಿಃ 12.09.1968 ರಲ್ಲಿ ತಹಸೀಲ್ದಾರ್ ಕಛೇರಿಯಿಂದ ಸಿದ್ದಯ್ಯನವರ ಹೆಸರಿಗೆ ಟೈಟಲ್ ಡೀಡ್ ಕೂಡಾ ನೀಡಲಾಗಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರಿಗೆ ಸಂಬಂಧಪಟ್ಟಂತೆ ಏನು ವ್ಯವಹಾರ ಆಗಿರುತ್ತದೆ ನಿಮಗೆ ಗೊತ್ತಾ ಎಂಬ ಪ್ರಶ್ನೆಗೆ ಸದರಿ ಜಮೀನಿನಲ್ಲಿ ನಮ್ಮ ತಂದೆ ಸಿದ್ದಯ್ಯ ನನ್ನ ಚಿಕ್ಕಪ್ಪದಿರಿಗೂ ಕೂಡಾ ಭಾಗ ನೀಡಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಈ ಬಗ್ಗೆ ವಿಭಾಗ ಪತ್ರ ಆಗಿತ್ತೂ ಇಲ್ಲವೂ ಗೊತ್ತಿಲ್ಲ.

ನನಗೆ ಸಿದ್ದಯ್ಯ ಮತ್ತು ಪ್ರತಿವಾದಿಯರ ಕುಟುಂಬದ ವ್ಯವಹಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ದಿಃ 10.03.1969 ರಂದು ಸಿದ್ದಯ್ಯ ಸರ್ವೆ ನಂಃ 14/4 ರಲ್ಲಿ 3 ಎಕರೆ 36 ಗುಂಟೆ ಜಮೀನು ಹಾಗೂ ಸರ್ವೆ ನಂಃ 18 ರಲ್ಲಿ 3 ಎಕರೆ 26 ಗುಂಟೆ ಜಮೀನನ್ನು ಅವರ ಸ್ವಂತ ತಮ್ಮನಾದ ದೊಡ್ಡಸಿದ್ದಯ್ಯ ರವರಿಗೆ ಕ್ರಯಕ್ಕೆ ಕೊಟ್ಟಿರುವ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದ ಪತ್ರ ಸಲ್ಲಿಸಿದ ನಂತರ 1 ನೇ ಪ್ರತಿವಾದಿ ಈ ಬಗ್ಗೆ ತಕರಾರು ಸಲ್ಲಿಸಿರುವ ಬಗ್ಗೆ ನನಗೆ ತಿಳಿದುಬಂದಿರುತ್ತದೆ. ತಕರಾರು ಸಲ್ಲಿಸಿದ ಸಮಯದಲ್ಲಿ ಆ ವಿಷಯದ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದರೆ ನನ್ನ ಅಣ್ಣ 2 ನೇ ಪ್ರತಿವಾದಿ ತಾನೇ ನೋಡಿಕೊಳ್ಳುತ್ತೇನೆ ಎಂದು ಓಡಾಡುತ್ತಿದ್ದ ಎಂದು ಸಾಕ್ಷಿ ಹೇಳುತ್ತಾರೆ. ನಾನು ಎಂ.ಕಾಂ. ಓದಿದ್ದರಿಂದ ಆ ವಿಷಯದ ಬಗ್ಗೆ ತಿಳಿದುಕೊಳ್ಳಬಹುದಾಗಿತ್ತು ಎಂದರೆ ನನ್ನ ಹಿರಿಯ ಅಣ್ಣ ಎಲ್ಲಾವನ್ನು ನೋಡಿಕೊಳ್ಳುತಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿಯರ ತಂದೆ 1979-80 ರಲ್ಲಿ ಕ್ರಯ ಮಾಡಿರುವಂತಹ ಜಮೀನುಗಳನ್ನು ಪುನಃ ಕೊಡಿಸಿಕೊಡಬೇಕಂದು ಮಾನ್ಯ ಉಪವಿಭಾಗಾಧಿಕಾರಿಗಳು, ಹುಣಸೂರು ರವರ ಮುಂದೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಈ ಬಗ್ಗೆ ಸಿದ್ದಯ್ಯನವರಿಗೆ ಯಾವ ವರ್ಷ ಆದೇಶವಾಗಿರುತ್ತದೆ ಎಂದರೆ ಈ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಈ ಬಗ್ಗೆ ದಿಃ 10.04.1984 ರಂದು ಸಿದ್ದಯ್ಯನವರ ಹೆಸರಿನಲ್ಲಿ ಆದೇಶವಾಗಿರುತ್ತದೆ ಎಂದದಿರೆ ಈ ಬಗ್ಗೆ ನನಗೆ ಗೊತ್ತಿಲ್ಲ ಪ್ರತಿವಾದಿ ರತ್ನಯ್ಯ ಈ ಬಗ್ಗೆ ನೋಡಿಕೊಳ್ಳುತ್ತಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ನನ್ನ ತಾಯಿ ಸಿದ್ದಯ್ಯನವರಿಗೆ ನಿಜವಾಗಲೂ ಮದುವೆಯಾಗಿದ್ದಾರೆ ಹಾಗೂ ನಾವು ಸಿದ್ದಯ್ಯನವರ ಮಕ್ಕಳುಗಳೇ ಆಗಿದ್ದರೆ ನಮಗೂ

ಕೂಡಾ ಸ್ವಾಧೀನ ಕೊಡಿಸಿಕೊಡಿ ಎಂದು ಅರ್ಜಿ ಸಲ್ಲಿಸುತ್ತಿದ್ದೆವು ಎಂಬ ಪ್ರಶ್ನೆಗೆ ಈ ಬಗ್ಗೆ ನನ್ನ ಅಣ್ಣ ಎಲ್ಲಾ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ.

ದಿಃ 12.12.1999 ರಂದು ಸಿದ್ದಯ್ಯನವರು ತೀರಿಹೋದ ನಂತರ ಅವರ ಹೆಂಡತಿ ಪುಟ್ಟಗೌರಮ್ಮ ಮತ್ತು ಪ್ರತಿವಾದಿಯರು ಉಪವಿಭಾಗಾಧಿಕಾರಿಗಳ ಮುಂದೆ ಆರ್ ಎ ನಂಃ 174/2004-05 ನ್ನು ಸ್ವಾಧೀನಕೊಡಿಸುವಂತೆ ಕೇಳಿ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಈ ಬಗ್ಗೆ ನನಗೆ ಗೊತ್ತಿಲ್ಲ ರತ್ನಯ್ಯ ಎಲ್ಲಾ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ದೊಡ್ಡಸಿದ್ದಯ್ಯನವರು ಜಮೀನುಗಳನ್ನು ಯಾರಿಗೆ ಮಾರಾಟ ಮಾಡಿದರು ಎಂದು ನಾನು ಕೇಳಿ ತಿಳಿದುಕೊಂಡಿಲ್ಲ. ಸದರಿ ಜಮೀನುಗಳನ್ನು ದೊಡ್ಡಸಿದ್ದಯ್ಯನವರು ಜಿ ವಿವೇಕಾನಂದ ರವರಿಗೆ ಮಾರಾಟ ಮಾಡಿದ್ದರು ಎಂದರೆ ಪ್ರತಿವಾದಿಯರು ತಕರಾರು ಹಾಕಿದ ನಂತರ ನನಗೆ ಈ ವಿಷಯ ಗೊತ್ತಾಗಿರುತ್ತದೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಈ ಬಗ್ಗೆ ದಿಃ 28.02.2011 ರಂದು ಉಪ ವಿಭಾಗಾಧಿಕಾರಿಗಳು ಪುಟ್ಟಗೌರಮ್ಮ ಮತ್ತು ಅವರ ಮಕ್ಕಳ ಪರವಾಗಿ ಆದೇಶ ಮಾಡಿರುತ್ತಾರೆ ಎಂದರೆ ಸರಿ. ಈ ಸಂಬಂಧ ಪುಟ್ಟಗೌರಮ್ಮ ಮತ್ತು ಅವರ ಮಕ್ಕಳು ದೊಡ್ಡಸಿದ್ದಯ್ಯ ಮತ್ತು ಕುಳ್ಳಬೋರಯ್ಯ ಹಾಗೂ ಜಿ ವಿವೇಕಾನಂದ ರವರ ಮೇಲೆ ಘೋಷತ್ಮಾಕ ಆದೇಶ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಅವರು ನಮ್ಮನ್ನು ಕೈ ಬಿಟ್ಟು ಸದರಿ ದಾವೆಯನ್ನು ಸಲ್ಲಿಸಿದ್ದರು ಎನ್ನುತ್ತಾರೆ. ಆ ರೀತಿ ನಾವು ಒಂದೇ ಕುಟುಂಬದಲ್ಲಿ ಇದಿದ್ದರೆ ನಮಗೆ ವಿಷಯ ಗೊತ್ತಿದ್ದಿದ್ದರೆ ನಾವು ಸದರಿ

ದಾವೆಯಲ್ಲಿ ವಾದಿ ಅಥವಾ ಪ್ರತಿವಾದಿಗಳಾಗಿ ಸೇರಿಕೊಳ್ಳುತ್ತಿದ್ದೆವು ಎಂದರೆ ನಮ್ಮ ಅಣ್ಣ ಎಲ್ಲಾವನ್ನು ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ.

ಅಸಲು ಸಂಃ 110/2005 ರಲ್ಲಿ ದಿಃ 09.04.2008 ರಂದು ಪ್ರಸ್ತುತ ಪ್ರತಿವಾದಿಗಳ ಪರವಾಗಿ ಡಿಕ್ರಿಯಾಗಿರುತ್ತದೆ ಎಂದರೆ ತಕರಾರು ಸಲ್ಲಿಸಿದ ನಂತರ ಈ ಬಗ್ಗೆ ನಮಗೆ ವಿಷಯ ಗೊತ್ತಾಗಿರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ತೀರ್ಪಿನ ವಿರುದ್ಧ ಪ್ರತಿವಾದಿಯರು 3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ನ್ಯಾಯಾಲಯ ಪ್ರತಿವಾದಿಯರಿಗೆ ಅವಕಾಶ ಕೊಡುವಂತೆ ಹೇಳಿ ಸದರಿ ನ್ಯಾಯಾಲಯವು ಇದೇ ನ್ಯಾಯಾಲಯಕ್ಕೆ ರಿಮ್ಯಾಂಡ್ ಮಾಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ನ್ಯಾಯಾಲಯ ಪ್ರತಿವಾದಿಯರಿಗೆ ಮುಕ್ತ ಅವಕಾಶ ನೀಡಿ ಪುನಃ ಪ್ರತಿವಾದಿಯರ ಪರವಾಗಿ ಡಿಕ್ರಿ ಮಾಡಿರುತ್ತದೆ ಎಂದರೆ ಈ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಡಿಕ್ರಿ ವಿರುದ್ಧ ಜಿ ವಿವೇಕಾನಂದ ಹಾಗೂ ಇತರರು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಡಿಕ್ರಿ ನಂತರ ದಿಃ 10.09.2008 ರಂದು ಪ್ರತಿವಾದಿಯರು ತಮ್ಮ ಹೆಸರಿನಲ್ಲಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಪ್ರತಿವಾದಿ ರತ್ನಯ್ಯ ತಾನೇ ಎಲ್ಲಾ ನೋಡಿಕೊಳ್ಳುತ್ತೇನೆಂದು ಸ್ವತ್ತನ್ನು ಲಪಟಾಯಿಸಿರುತ್ತಾರೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಸದರಿ ಆದೇಶದ ವಿರುದ್ಧ ನಾನು ಯಾವುದೇ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿಲ್ಲ. ಓ ಎಸ್ 110/2015 ಆದೇಶ ನಮಗೆ ಬಂಧನಕಾರಿಯಾಗುವುದಿಲ್ಲ ಎಂದು ಹೇಳಿ ಅದನ್ನು ಪ್ರಶ್ನೆ ಮಾಡಿರುತ್ತೇನೆಯಾ ಎಂದರೆ

ಅದರಲ್ಲಿ ನಮ್ಮನ್ನು ಪಾರ್ಟಿ ಮಾಡಿಲ್ಲ ಅವು ನಮ್ಮ ಹಿಸ್ಸೆಗೆ ಸಂಬಂಧ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

ಸರ್ವೆ ನಂಃ 18 ಐಟಂ ನಂಃ 4 ದಾವಾ ಸ್ವತ್ತು ಸಿದ್ದಯ್ಯನವರಿಗೆ ಮಂಜೂರಾದಂತಹ ಜಮೀನು ಎಂದರೆ ಸರಿ. ಐಟಂ ನಂಃ 5 ಜಮೀನು ಪುಟ್ಟಗೌರಮ್ಮ ರವರ ಹೆಸರಿನಲ್ಲಿ ಸರ್ಕಾರದಿಂದ ಮಂಜೂರಾದಂತಹ ಜಮೀನು ಎಂದರೆ ನಾವು ಒಟ್ಟು ಕುಟುಂಬದಲ್ಲಿ ಇದ್ದಾಗ ಪುಟ್ಟಗೌರಮ್ಮ ರವರ ಹೆಸರಿಗೆ ಸರ್ಕಾರದಿಂದ ಮಂಜೂರು ಮಾಡಿಸಿಕೊಂಡಿರುತ್ತೇವೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹುಣಸೂರು.

ಪಿಡಬ್ಲ್ಯು.1